UASB LIBRARY
Newspaper Clippings
Pg .1 Friday 29-10-2021 Jai Kisan



ನ.11ರಿಂದ ಜಿಕೆವಿಕೆ ಕೃಷಿ ಮೇಳ ಆರಂಭ

ಬೆಂಗಳೂರು: ಕೃಷಿ ವಿಶ್ವವಿದ್ಯಾನಿಲಯದ (ಜಿಕೆವಿಕೆ) ಆವರಣದಲ್ಲಿ ನ.11 ರಿಂದ 14ರವರೆಗೆ 'ಕೃಷಿ ಮೇಳ-2021' ಆಯೋಜಿಸಲಾಗುತ್ತಿದ್ದು, ಬುಧವಾರ ಲಾಂಛನ ಬಿಡುಗಡೆ ಮಾಡಲಾಯಿತು. ಕೋವಿಡ್-19, ನಿಯಮಗಳ ಅನುಸಾರ ನಡೆಯುವ ಮೇಳವನ್ನು ಭೌತಿಕವಾಗಿ ಮತ್ತು ಆನ್‌ಲೈನ್ ಮೂಲಕವೂ ವೀಕ್ಷಿಸಬಹುದು. 10 ಆಹಾರ ಬೆಳೆಯ ತಳಿಗಳು ಮತ್ತು 28 ಕೃಷಿ ತಂತ್ರಜ್ಞಾನಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಕೃಷಿ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದ ರೈತರಿಗೆ ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಮಟ್ಟದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುತ್ತದೆ.



28-10-2021
Vv Pg 07

ಐಐಎಸ್ಸಿ ವಿಜ್ಞಾನಿಗಳ ಆವಿಷ್ಕಾರ

ಅಪಸ್ಮಾರಕ್ಕೆ ದಾಳಿಂಬೆ ರಸ ಮದ್ದು?

ಪ್ರಜಾವಾಣಿ ವಾರ್ತೆ



ಬೆಂಗಳೂರು: ದಾಳಿಂಬೆ ರಸ ಸೇವನೆಯಿಂದ ಆಯಸ್ಸು ಹೆಚ್ಚುತ್ತದೆ ಎಂಬ ಅಂಶವನ್ನು ರಾಜ್ಯದ ವಿಜ್ಞಾನಿಗಳು ಆರು ವರ್ಷಗಳ ಹಿಂದೆ ಪತ್ತೆಹಚ್ಚಿದ್ದರು. ಈ ಸಂಶೋಧನೆಯನ್ನು ಅಮೆರಿಕದ ನ್ಯಾಷನಲ್ ಇನ್‌ಸ್ಟಿಟ್ಯೂಟ್ಸ್ ಆಫ್ ಹೆಲ್ತ್ ಮಾನ್ಯ ಮಾಡಿತ್ತು. ಈ ವಿಜ್ಞಾನಿಗಳ ತಂಡವು ಅಪಸ್ಮಾರ ಗುಣಪಡಿಸಬಲ್ಲ ಇನ್ನೊಂದು ಆವಿಷ್ಕಾರವನ್ನು ನಡೆಸಿದೆ.

ಈ ಬಾರಿ ತಂಡವು ಸಂಶೋಧಿಸಿರುವ 'ರಹಸ್ಯ ಔಷಧ'ವು ದಾಳಿಂಬೆಯಲ್ಲಿರುವ ನಿರ್ದಿಷ್ಟ ರಾಸಾಯನಿಕ. ಪ್ರಾಣಿಗಳಲ್ಲಿ ಇದು ಅಪಸ್ಮಾರವನ್ನು ಪರಿಣಾಮಕಾರಿಯಾಗಿ ಗುಣಪಡಿಸಿರುವುದು ಅಧ್ಯಯನದಲ್ಲಿ ದೃಢಪಟ್ಟಿದೆ.

'ದಾಳಿಂಬೆಯ ಸೇವನೆಯು ನರ ಸಂಬಂಧಿ ಸಮಸ್ಯೆಗಳ ನಿವಾರಣೆಗೆ ಪ್ರಯೋಜನಕಾರಿ ಎಂಬುದನ್ನು ಜಗತ್ತಿನಾದ್ಯಂತ ನಡೆದಿರುವ ವಿವಿಧ ಅಧ್ಯಯನಗಳು ತೋರಿಸಿಕೊಟ್ಟಿವೆ. ಈ ಕುರಿತ ಸಂಶೋಧನೆಗಳಿಗೆ ಅಮೆರಿಕದಲ್ಲಿ ಹೆಚ್ಚಿನ ಒಲವು ವ್ಯಕ್ತವಾಗಿದೆ. ಅಮೆರಿಕದಲ್ಲಿ ಈಗಾಗಲೇ ದಾಳಿಂಬೆಯ ಸಾರಕ್ಕೆ ಸಂಬಂಧಿಸಿ 15 ಪೇಟೆಂಟ್‌ಗಳನ್ನು ಪಡೆಯಲಾಗಿದೆ. ಆದರೆ, ಅಪಸ್ಮಾರ ಚಿಕಿತ್ಸೆಗೆ ಇದನ್ನು ಬಳಸುವ ಸಾಧ್ಯತೆ ಕುರಿತು ಅಂತರರಾಷ್ಟ್ರೀಯ ಮಟ್ಟದ ಯಾವುದೇ ಸಂಶೋಧನೆಗಳು ಗಮನಹರಿಸಿರಲಿಲ್ಲ. ಈ ವಿಚಾರದಲ್ಲಿ ನಮ್ಮ ಸಂಶೋಧನೆ ಮಹತ್ವದ್ದು' ಎಂದು ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ) ಬೆಳವಣಿಗೆ ಮತ್ತು ಜೀವವೈದ್ಯಕೀಯ ವಂಶಾವಳಿ ವಿಜ್ಞಾನ (ಡೆವೆಲಪ್ಮೆಂಟಲ್ ಆ್ಯಂಡ್ ಬಯೋಮೆಡಿಕಲ್ ಜೆನೆಟಿಕ್ಸ್) ಪ್ರಾಧ್ಯಾಪಕ ಡಾ.ಉಪೇಂದ್ರ ನೊಂಗ್ಥೊಂಬಾ ತಿಳಿಸಿದರು. ಅವರು ಈ ಅಧ್ಯಯನ ತಂಡದ ಹಿರಿಯ ಸಂಶೋಧಕರು.

ಪ್ರಸ್ತುತ ಅಪಸ್ಮಾರ ಚಿಕಿತ್ಸೆಗೆ 12 ಬಗೆಯ ಔಷಧಗಳು ಲಭ್ಯ. ಅವುಗಳನ್ನು ನಿರಂತರವಾಗಿ ಮೂರರಿಂದ ಐದು ವರ್ಷಗಳ ಕಾಲ ಸೇವಿಸಬೇಕಾಗುತ್ತದೆ. ಆದಾಗ್ಯೂ ಅವೆಲ್ಲವೂ ಫಲಪ್ರದವಾಗುತ್ತವೆ ಎನ್ನಲಾಗದು. ಇವುಗಳಲ್ಲಿ ನಾಲ್ಕು ಔಷಧಗಳ ಬಳಕೆಗೆ ಮಾತ್ರ ವೈದ್ಯರು ಸಾಮಾನ್ಯವಾಗಿ ಶಿಫಾರಸು ಮಾಡುತ್ತಾರೆ ಎಂದು ಡಾ. ನೊಂಗ್ಥೊಂಬಾ ತಿಳಿಸಿದರು.

ಭಾರತೀಯ ಅಪಸ್ಮಾರ ಸಂಸ್ಥೆಯ ಬೆಂಗಳೂರು ಶಾಖೆಯ ಅಧ್ಯಕ್ಷ ಮುರಳೀಧರನ್ ಕೆ.ವಿ. ಅವರೂ ಈ ವಿಚಾರವನ್ನು ದೃಢಪಡಿಸಿದರು.

'ಸತತ ಮೂರರಿಂದ ಐದು ವರ್ಷಗಳ ಕಾಲ ಸೇವಿಸಿದರೆ ಮಾತ್ರ ಈ ಔಷಧಗಳು ಅಪಸ್ಮಾರ ನಿವಾರಣೆಗೆ ಪರಿಣಾಮಕಾರಿಯಾಗಬಲ್ಲವು. ಇದರ ಲಕ್ಷಣಗಳು ಕ್ಷೀಣಿಸಿದ ಬಳಿಕವಷ್ಟೇ ವ್ಯಕ್ತಿಯು ಈ ಔಷಧಗಳ ಸೇವನೆಯನ್ನು ನಿಲ್ಲಿಸಬಹುದು. ಅಷ್ಟೇ ಅಲ್ಲ, ಈ ಔಷಧ ಸೇವಿಸುವವರು ರಾತ್ರಿ ಚೆನ್ನಾಗಿ ನಿದ್ರೆ ಮಾಡಬೇಕು' ಎಂದು ಈ ಮುರಳೀಧರನ್ ತಿಳಿಸಿದರು.

ಈ ಸಾಂಪ್ರದಾಯಿಕ ಔಷಧಗಳಿಗೆ ಹೋಲಿಸಿದರೆ, ಐಐಎಸ್ಸಿಯ ವಿಜ್ಞಾನಿಗಳು ಆವಿಷ್ಕರಿಸಿರುವ ಔಷಧ ಹೆಚ್ಚು ಪರಿಣಾಮಕಾರಿಯಾಗಬಲ್ಲುದು. ಹಣ್ಣಿಗೆ ಮುತ್ತಿಗೆ ಬೀಳುವ ನೊಣದ ಮೇಲೆ ವಿಜ್ಞಾನಿಗಳು ಈ ಪ್ರಯೋಗ ನಡೆಸಿದ್ದರು. 'ಈ ಕಾರ್ಯವಿಧಾನವು ತುಸು ಅಚ್ಚರಿದಾಯಕ. ಪ್ರಯೋಗಕ್ಕೆ ಬಳಸಿದ ಹಣ್ಣಿನ ನೊಣಗಳಲ್ಲಿ ಜೀವಕೋಶಗಳಿಗೆ ಆದ ಹಾನಿಯು ಈ ರಾಸಾಯನಿಕ ಸಂಯುಕ್ತವನ್ನು ಉಣಿಸಿದ ಆರು ಗಂಟೆಗಳಲ್ಲಿ ಶಮನಗೊಂಡಿದೆ' ಎಂದು ಡಾ.ನೊಂಗ್ಥೊಂಬಾ ವಿವರಿಸಿದರು.

29-10-2021
Pv Pg 07

For more information visit
University Library Website
Web - uasbagrilibindia.org
E-mail- librarian@uasbangalore.edu.in

"Life is a gift. Wake up everyday & realize that"

ಉ.ಕೊರಿಯಾದಲ್ಲಿ ಹಣದುಬ್ಬರ ತೀವ್ರ | ಕಡಿಮೆ ಆಹಾರ ತಿನ್ನಿ ಎಂದ ಸರ್ಕಾರ

ಇಲ್ಲಿ ಕೆಜಿ ಬಾಳೆಹಣ್ಣಿಗೆ 3,300 ರೂ.!

ಪ್ಯೊಂಗ್‌ಯಾಂಗ್: ಉತ್ತರ ಕೊರಿಯಾದಲ್ಲಿ ಆಹಾರದ ಕೊರತೆ ತೀವ್ರವಾಗಿ ಕಾಡಿದೆ. ಆಹಾರ ವಸ್ತುಗಳ ಬೆಲೆ ಗಗನಮುಖಿಯಾಗಿದೆ. ಈ ಹಿನ್ನೆಲೆಯಲ್ಲಿ ದೇಶವಾಸಿಗಳು 2025ರ ತನಕ ಕಡಿಮೆ ಆಹಾರ ಸೇವಿಸಬೇಕು ಎಂದು ನಾಯಕ ಕಿಮ್ ಜಾಂಗ್ ಉನ್ ಕರೆ ನೀಡಿದ್ದಾರೆ. ದೇಶದ ಮೇಲೆ ವಿವಿಧ ನಿರ್ಬಂಧಗಳಿದ್ದು, ಆಹಾರ ಆಮದು ಮಾಡಿಕೊಳ್ಳುವುದು ಕೂಡ ಕಷ್ಟವಾಗಿದೆ. ಹೀಗಾಗಿ ದೇಶವಾಸಿಗಳ ಆಹಾರದ ಬೇಡಿಕೆ ಪೂರೈಕೆ ಮಾಡುವುದಕ್ಕೆ ಅಸಾಧ್ಯವಾಗಿದೆ. ಆದ್ದರಿಂದ ಈ ರೀತಿ ಕ್ರಮಗಳನ್ನು ಜನರೇ ತೆಗೆದುಕೊಳ್ಳಬೇಕು ಎಂದು ಕಿಮ್ ಜಾಂಗ್ ಉನ್ ಹೇಳಿದ್ದಾಗಿ ರೇಡಿಯೋ ಫ್ರೀ ಏಷ್ಯಾ ವರದಿ ಮಾಡಿದೆ. 1990ರ ದಶಕದ ತೀವ್ರ ಬರ ಪರಿಸ್ಥಿತಿ ಬಳಿಕ ಈಗಲೇ ಅಂತಹ ಸನ್ನಿವೇಶ ಮತ್ತೊಮ್ಮೆ ಉತ್ತರ ಕೊರಿಯಾವನ್ನು ಕಾಡಿದೆ ಎಂದು ಮೂಲಗಳು ತಿಳಿಸಿವೆ.

ಯಾವುದಕ್ಕೆ ಎಷ್ಟು ಬೆಲೆ

ಕಾಫಿ ಪುಡಿ-	7,300 ರೂ./ಕಿಲೋ
ಚಹಾ ಪುಡಿ -	5,100 ರೂ./ಕಿಲೋ
ಶ್ಯಾಂಪೂ ಬಾಟಲ್ -	14,000 ರೂ.
ಜೋಳ -	204 ರೂ./ಕಿಲೋ
ಬಾಳೆ ಹಣ್ಣು-	3,300 ರೂ./ಕಿಲೋ



ಭಾರಿ ಮಳೆಯಿಂದ ಬೆಳೆ ನಾಶ

ಉತ್ತರ ಕೊರಿಯಾದಲ್ಲಿ ಆಹಾರ ಕೊರತೆ ಕಾಣಿಸಿಕೊಳ್ಳಲು ಇತ್ತೀಚೆಗೆ ಸಂಭವಿಸಿದ ಭಾರಿ ಮಳೆ ಹಾಗೂ ಪ್ರವಾಹ ಪ್ರಮುಖ ಕಾರಣ. 2020ರ ಸೆಪ್ಟೆಂಬರ್‌ನಲ್ಲಿ ಭಾರಿ ಮಳೆಯಾಗಿದೆ. 1981ರ ಬಳಿಕ ಸುರಿದ ಅತ್ಯಧಿಕ ಮಳೆ ಇದಾಗಿದೆ. 40 ಸಾವಿರ ಹೆಕ್ಟೇರ್‌ಗೂ ಅಧಿಕ ಪ್ರದೇಶದಲ್ಲಿ ಬೆಳೆ ನಾಶವಾಗಿದೆ ಎಂದು ಅಂದಾಜು ಮಾಡಲಾಗಿದೆ. 16 ಸಾವಿರಕ್ಕೂ ಅಧಿಕ ಜನರು ಮನೆ ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ.

ಕೋವಿಡ್ ನಿರ್ಬಂಧವೂ ಕಾರಣ

ದೇಶದಲ್ಲಿ ಆಹಾರದ ಕೊರತೆ ಹೆಚ್ಚಾಗಲು ಕೋವಿಡ್ ನಿರ್ಬಂಧ ಹೆಚ್ಚಾಗಿದ್ದು ಕೂಡ ಕಾರಣ. ದೇಶದ ಎಲ್ಲ ಗಡಿಗಳನ್ನು ಬಂದ್ ಮಾಡಲಾಗಿದೆ. ಉತ್ತರ ಕೊರಿಯಾಕ್ಕೆ ಬಹುತೇಕ ಎಲ್ಲ ನೆರವು ಕೂಡ ಚೀನಾದಿಂದಲೇ ಲಭ್ಯವಾಗುತ್ತಿದೆ. ಈಗ ಅಲ್ಲಿ ಕೋವಿಡ್ ಸಂಕಷ್ಟ ಎದುರಾಗಿರುವ ಕಾರಣ ನೆರವಿನ ಪ್ರಮಾಣ ಬಹಳ ಕಡಿಮೆಯಾಗಿದೆ. ಇದು ಉತ್ತರ ಕೊರಿಯಾ ಜನರನ್ನು ಕಂಗೆಡುವಂತೆ ಮಾಡಿದೆ. ಇನ್ನು ದೇಶದಲ್ಲಿ ಬೆಳೆದ ಆಹಾರ ಉತ್ಪನ್ನಗಳು ಪ್ರತಿಕೂಲ ಹವಾಮಾನದ ಕಾರಣ ನಾಶವಾಗಿದ್ದು, ಸಂಕಷ್ಟವನ್ನು ಇನ್ನಷ್ಟು ಹೆಚ್ಚು ಮಾಡಿದೆ.

29-10-2021 Vv Pg 09

29-10-2021 Hd Pg 13

ಕಡಿಮೆ ದರಕ್ಕೆ ಎಲ್ಲಾ ಕೃಷಿ ಸಲಕರಣೆ

ಕೋಲಾರ: ನಬಾರ್ಡ್ ಹಾಗೂ ಡಿಸಿಸಿ ಬ್ಯಾಂಕ್ ಸಹಯೋಗದಲ್ಲಿ ಅನ್ನದಾತನಿಗೆ ಅಗತ್ಯವಾದ ಎಲ್ಲಾ ಪರಿಕರಗಳು ಒಂದೇ ಸೂರಿನಡಿ ಸಿಗುವಂತೆ ಮಾಡುವ ರೈತ ಮಾಲ್ ಸ್ಥಾಪನೆಗೆ ಚಿಂತನೆ ನಡೆಸಲಾಗಿದೆ, ಕೃಷಿಕನ ಋಣ ತೀರಿಸುವ ಸಣ್ಣ ಪ್ರಯತ್ನ ಮಾಡುತ್ತಿದ್ದು, ಅಂತಿಮ ರೂಪ ನೀಡಲು ನ.13 ರಂದು ಮತ್ತೆ ಸಭೆ ಕರೆಯುವುದಾಗಿ ಶಾಸಕ ಕೆ.ಆರ್.ರಮೇಶ್ ಕುಮಾರ್ ತಿಳಿಸಿದರು.

ಜಿಲ್ಲಾ ಸಹಕಾರಿ ಯೂನಿಯನ್ ಸಭಾಂಗಣದಲ್ಲಿ ಕೋಲಾರ,ಚಿಕ್ಕಬಳ್ಳಾಪುರ ಜಿಲ್ಲೆಯ ಶಾಸಕರು ಹಾಗೂ ಸಹಕಾರಿ ಮುಖಂಡರ ಸಭೆಯಲ್ಲಿ ಅವರು ಮಾತನಾಡುತ್ತಿದ್ದರು. ರೈತರಿಗೆ ಅಗತ್ಯವಾದ ಗೊಬ್ಬರ,ಕೃಷಿ ಯಂತ್ರಗಳು, ಕೀಟನಾಶಕ, ಕೃಷಿಗೆ ಅಗತ್ಯವಾದ ಎಲ್ಲಾ ರೀತಿಯ ಸಲಕರಣೆಗಳನ್ನು ಒಂದೇ ಸೂರಿನಡಿ ಸಿಗುವಂತೆ ಮಾಡಲು ಟಿಎಪಿಸಿಎಂಎಸ್ ಆಶ್ರಯದಲ್ಲಿ ರೈತ ಮಾಲ್ ಸ್ಥಾಪಿಸುವ ಮೂಲಕ ರೈತರು ಕ್ರೆಡಿಟ್ ಕಾರ್ಡ್ ಬಳಸಿ ಖರೀದಿಗೆ ಅವಕಾಶ ಕಲ್ಪಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.ದುರುಪಯೋಗಕ್ಕೆ ಅವಕಾಶ ವಿಲ್ಲದಂತೆ ರೈತರಿಗೆ ಡಿಸಿಸಿ ಬ್ಯಾಂಕ್ ಮೂಲಕ ಕ್ರೆಡಿಟ್ ಕಾರ್ಡ್ ನೀಡಲಿದ್ದು, ಅದನ್ನು ಬಳಸಿ ಅಗತ್ಯ ಸಲಕರಣೆ ಪಡೆಯಬಹುದಾಗಿದೆ ಎಂದರು. 2004 ರಿಂದ 2014ರವರೆಗೂ ಡಿಸಿಸಿ ಬ್ಯಾಂಕ್ ದಿವಾಳಿಯಾಗಿ ಜಿಲ್ಲೆಯ ರೈತರಿಗೆ ಯಾವುದೇ ಸಾಲ ಮನ್ನಾ ಪ್ರಯೋಜನ ಸಿಕ್ಕಿರಲಿಲ್ಲ,ಇದೀಗ ಬ್ಯಾಂಕ್ ಆರ್ಥಿಕ ಪರಿಸ್ಥಿತಿ ಸುಧಾರಿಸಿದೆ,ವಾಣಿಜ್ಯ ಬ್ಯಾಂಕುಗಳು, ಚಿನ್ನದ ಸಾಲ ನೀಡುವ ಬ್ಯಾಂಕುಗಳಿಗೆ ಕರುಣೆ ಇಲ್ಲ, ರೈತರ ಶೋಷಣೆ ನಡೆಯುತ್ತಿದೆ, ಇದೆಲ್ಲವನ್ನು ತಪ್ಪಿಸಿ ರೈತರ ಋಣ ತೀರಿಸುವ ಸದುದ್ದೇಶ ಇದಾಗಿದೆ ಎಂದರು.

ಅಡಿಕೆ ಕ್ಯಾನ್ಸರ್‌ಕಾರಕವಲ್ಲ: ಬೆಳೆಗಾರರಲ್ಲಿ ಸಂತಸ

ಶಿವಮೊಗ್ಗ: ರಾಜ್ಯದ ಶಿವಮೊಗ್ಗ, ಚಿಕ್ಕಮಗಳೂರು, ದಾವಣಗೆರೆ, ಚಿತ್ರದುರ್ಗ ಸೇರಿದಂತೆ ಅನೇಕ ಜಿಲ್ಲೆಗಳಲ್ಲಿ ರೈತರ ಪ್ರಮುಖ ಆರ್ಥಿಕ ಜೀವನಾಡಿ ಬೆಳೆಯಾಗಿರುವ ಅಡಿಕೆ ಕ್ಯಾನ್ಸರ್‌ಕಾರಕ ಎಂಬ ಅಂಶವನ್ನು ಅಮೆರಿಕಾದ ಮೊಲೆಕ್ಯುಲರ್ ಸೆಲ್ ಹೆಸರಿನ ಜನರಲ್‌ನಲ್ಲಿ ಕೈಬಿಡಲಾಗಿದೆ.

ಇದರಿಂದಾಗಿ ಅಡಿಕೆ ಕ್ಯಾನ್ಸರ್‌ಕಾರಕವಲ್ಲ ಹಾಗೂ ಆರೋಗ್ಯಕ್ಕೆ ಹಾನಿಕಾರಕವಲ್ಲ ಎಂಬ ಅಡಿಕೆ ಬೆಳೆಗಾರರ ವಾದಕ್ಕೆ ಮತ್ತಷ್ಟು ಪುಷ್ಠಿ ಸಿಕ್ಕಂತಾಗಿದೆ. ಅಡಿಕೆ ಕ್ಯಾನ್ಸರ್‌ಕಾರಕ ಎಂದು ಕೇಂದ್ರ ಸರ್ಕಾರ, ಸುಪ್ರೀಂಕೋರ್ಟ್‌ಗೆ ಅಫಿಡೆವಿಟ್ ಸಲ್ಲಿಸಿತ್ತು. ಈ ಬಗ್ಗೆ ಅಡಿಕೆ ಬೆಳೆಗಾರರು ಹಾಗೂ ರೈತರು ತೀವ್ರ ಆಕ್ಷೇಪ ವ್ಯಕ್ತಪಡಿಸಿ ಕೇಂದ್ರದ ನಿರ್ಧಾರ ಖಂಡಿಸಿದ್ದರು. ಆದರೆ, ಈ ಸಂದರ್ಭದಲ್ಲಿ ನ್ಯಾಯಾಲಯಕ್ಕೆ ಅಫಿಡೆವಿಟ್‌ನ್ನು ಸಲ್ಲಿಸಿಲ್ಲ ಎಂಬ ಹೇಳಿಕೆ ಬಿಜೆಪಿಯ ಅನೇಕ ನಾಯಕರು ನೀಡಿದ್ದರು. ಅಫಿಡೆವಿಟ್‌ಗೆ ಸಂಬಂಧಿಸಿದ ವಿಚಾರಣೆ ನ್ಯಾಯಾಲಯದಲ್ಲಿ ನಡೆಯುತ್ತಿದ್ದು, ಇದರಿಂದಾಗಿ ಅಡಿಕೆ ಬೆಳೆಗಾರರು ತೀವ್ರ ಆತಂಕಕ್ಕೆ ಒಳಗಾಗಿದ್ದರು. ಅಡಿಕೆ ಬೆಳೆಗಾರರ ಮುಖದಲ್ಲಿ ಸಂತಸದ ಗೆರೆಯನ್ನು ಮೂಡಿಸಿದೆ.

29-10-2021 Sk Pg 11